

ವರ್ತಿಸಬೇಕಿಲ್ಲ ಎನ್ನುವುದೂ, ದಿಟ್ಟತನವೆಂದರೆ ಆಕ್ರೋಶದಿಂದ ಅರುಚುವುದು, ಕಿರುಚುವುದು ಅಲ್ಲವೆಂದು ನಿಧಾನಕ್ಕೆ ಅರಿವು ಮೂಡಿತು. ಹೀಗೆಂದೇ ನನ್ನ ಮೇಲೆ ಆದ ಅವರ ಪ್ರಭಾವ ಮಾತ್ರ ಯಾವತ್ತೂ ಅಳಿಸಿ ಹೋಗುವಂಥದ್ದಾಗಿರಲಿಲ್ಲ. ಏಕೆಂದರೆ ಎಂಬತ್ತರ ದಶಕದಲ್ಲಿ ಅವರು ಗೆಳತಿಯರೊಡಗೂಡಿ ಮಾಡುತ್ತಿದ್ದಂತಹ ಕೆಲಸಗಳು, ಪ್ರತಿಭಟನೆಗಳು, ಬರಹಗಳು ಅಷ್ಟೊಂದು ಪ್ರಭಾವಶಾಲಿಯೂ ಶಕ್ತಿಶಾಲಿಯೂ ಆಗಿದ್ದವು.

ಮುಂದೆ ಮದುವೆಯಾಗಿ ನಾನು ಹಾಸನಕ್ಕೆ ಬಂದೆ. ನನ್ನದೇ ಸಾಂಸಾರಿಕ ಜಂಜಡಗಳಲ್ಲಿ ಮುಳುಗಿಹೋದೆ. ವಿಜಯಾ ಮೇಡಂ ಮೈಸೂರಿನಲ್ಲಿ ನೆಲೆಸಿದ್ದರಿಂದ ನನಗವರು ಮತ್ತೆ ಸಂಪರ್ಕಕ್ಕೆ ಬರಲೇ ಇಲ್ಲ. ಈ ಮಧ್ಯೆ ಜನವರಿ 6, 1999ರಲ್ಲಿ ಘಟಿಸಿದ ಒಂದು ರಸ್ತೆ ಅಪಘಾತದಿಂದ ಕೆಲವಷ್ಟು ಪ್ರಮಾಣದಲ್ಲಿ ಮಿದುಳಿನ ಶಕ್ತಿಯನ್ನು, ಕೆಲಮಟ್ಟಿನ ನೆನಪಿನ ಶಕ್ತಿಯನ್ನು, ಆರೋಗ್ಯವನ್ನೂ ಕಳೆದುಕೊಂಡು ವಿಜಯಾ ದಬ್ಬೆಯವರು ನಿಷ್ಕ್ರಿಯರಾಗಿರುವ ಸುದ್ದಿ ಬಂದಾಗ ತೀವ್ರ ದುಃಖವಾಗಿತ್ತು.

ಅಪಘಾತದ ನಂತರ ಹೆಚ್ಚಾಗಿ ಮೈಸೂರಿನಲ್ಲೇ